**<u>ಮುಂದುವರೆದ ಪಾಟೀ ಸವಾಲು - ಆರೋಪಿ ಪರ ವಕೀಲರಿಂದ –</u>**

ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಸಹಿ ನನ್ನದೇ . ಸದರಿ ಪ್ರಮಾಣ ಪತ್ರದಲ್ಲಿ ಪುಟ ಸಂಖ್ಯೆ .2 ರಲ್ಲಿ ದಿಃ 26.06.2022 ರಂದು ವಕೀಲರ ಮೂಲಕ ಲೀಗಲ್ ನೋಟಿಸನ್ನು ಆರೋಪಿಗೆ ಕೊಟ್ಟಿರುತ್ತೇನೆ ಎಂದು ನಮೂದಿಸಿರುತ್ತೇನೆ ಎಂದರೆ ಸದರಿ ದಿನಾಂಕವನ್ನು ತಪ್ಪಾಗಿ ನಮೂದಿಸಿದ್ದು ನಾನು ದಿಃ 26.06.2023 ರಂದು ಸದರಿ ನೋಟೀಸನ್ನು ಕಳುಹಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಈ ಪಿರ್ಯಾದನ್ನು ನ್ಯಾಯಾಲಯಕ್ಕೆ ಯಾವ ದಿನಾಂಕದಂದು ಸಲ್ಲಿಸಿದೆ ಎಂದು ನನಗೆ ನೆನಪಿಲ್ಲ. ನಾನು ಸದರಿ ದೂರನ್ನು ನ್ಯಾಯಾಲಯಕ್ಕೆ ದಿಃ 21.07.2023 ರಂದು ಸಲ್ಲಿಸಿದ್ದೇನೆ ಎಂದರೆ ನನಗೆ ನೆನಪಿಲ್ಲ. ನಾನು ಸಲ್ಲಿಸಿರುವ ಪ್ರಮಾಣ ಪತ್ರದ ದಿನಾಂಕದ ಪ್ರಕಾರ ಪಿರ್ಯಾದು ದಾಖಲಿಸುವ ಒಂದು ವರ್ಷ ಪೂರ್ವ ನೋಟೀಸನ್ನು ಜಾರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 26.06.2022 ರ ನಂತರ ನಾನು ವಕೀಲರ ಮೂಲಕ ಆರೋಪಿಗೆ ಯಾವುದೇ ನೋಟೀಸ್ ನ್ನು ಕಳುಹಿಸಿಲ್ಲ ಎಂದರೆ ಸಾಕ್ಷಿ ದಿನಾಂಕ ತಪ್ಪಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿ ದಿಃ 26.06.2023 ರಂದು ಲೀಗಲ್ ನೋಟೀಸನ್ನು ಕಳುಹಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಎರಡು ಬಾರಿ ಸತ್ಯಾಪನ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸಾಕ್ಷಿ ಮೊದಲ ಬಾರಿ ಸಲ್ಲಿಸಿದ ಸತ್ಯಾಪನ ಹೇಳಿಕೆಯಲ್ಲಿ ದಿನಾಂಕ ತಪ್ಪಾದ ಕಾರಣ ಅದನ್ನು ಸರಿಪಡಿಸಿ ಇನ್ನೊಂದು ಸತ್ಯಾಪನ ಹೇಳಿಕೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ಮೊದಲ ಬಾರಿಗೆ ನನ್ನ ಪ್ರಮಾಣ ಪತ್ರವನ್ನು ದಿಃ 04.10.2023 ರಂದು ಸಲ್ಲಿಸಿದ್ದೇನೆ ಎಂದರೆ ಸಾಕ್ಷಿ ನನಗೆ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಎರಡನೇ ಬಾರಿಗೆ ದಿಃ 15.11.2023 ರಂದು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ನನಗೆ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ.

ಒಂದೇ ದೂರಿಗೆ ಸಂಬಂಧಪಟ್ಟಂತೆ ಎರೆಡೆರೆಡು ಬಾರಿ ಸತ್ಯಾಪನ ಹೇಳಿಕೆ ನೀಡಲು ಸತ್ಯಾಪನ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಎರಡನೇ ಬಾರಿಗೆ ಸತ್ಯಾಪನ ಪ್ರಮಾಣ ಪತ್ರ ಸಲ್ಲಿಸಿ ಸದರಿ ವಿಚಾರಣಾ ಸಮಯದಲ್ಲಿ ಚೆಕ್ ನ ದಿಃ 26.06.2022 ಎಂದು ಮೊದಲು ಸಲ್ಲಿಸಿದ ಸತ್ಯಾಪನ ಪ್ರಮಾಣ ಪತ್ರದಲ್ಲಿ ಬೆರಳಚ್ಚುಗಾರರಿಂದ ತಪ್ಪಾಗಿದೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

ನಾನು ಸಲ್ಲಿಸಿರುವ ನಿಪಿ.3 ರಲ್ಲಿ ಎರಡು ವಿಳಾಸಗಳು ನಮೂದಿದ್ದು ಒಂದು ಆರೋಪಿಯ ಮನೆಯ ವಿಳಾಸ ಇನ್ನೊಂದು ಆಕೆಯು ಕೆಲಸ ಮಾಡುವ ಕಚೇರಿಯ ವಿಳಾಸ ಆಗಿರುತ್ತದೆ. ನಾನು ಸದರಿ ಎರಡೂ ವಿಳಾಸಗಳಿಗೆ ನೋಟೀಸನ್ನು ಕಳುಹಿಸಿರುತ್ತೇನೆ. ಸಾಕ್ಷಿ ಮುಂದುವರೆದು ಸದರಿ ನಾನು ಕಳುಹಿಸಿದ ನೋಟೀಸ್ ಆರೋಪಿಯ ಮನೆಯ ವಿಳಾಸಕ್ಕೆ ತಲುಪಿರುತ್ತದೆ. ನಾನು ಸದರಿ ನೋಟಿಸ್ ಗಳು ಆರೋಪಿಯ ವಿಳಾಸಕ್ಕೆ ಜಾರಿಯಾದ ಕುರಿತು ಸ್ವೀಕೃತಿ ಪತ್ರವನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೇನೆ . ಸಾಕ್ಷಿಗೆ ಈಗ ನಮ್ಮ ಪರವಾಗಿ ಹಾಜರುಪಡಿಸಿ ನಿಶಾನೊಳಪಟ್ಟ ದಾಖಲೆಗಳನ್ನು ತೋರಿಸಲಾಗಿ ಅದರಂತೆ ಸಾಕ್ಷಿ ನಿಪಿ. 5 ನ್ನು ನೋಡಿ ಸದರಿ ದಾಖಲೆಯೇ ನನಗೆ ಅಂಚೆ ಕಚೇರಿಯವರು ನೀಡಿದ ದಾಖಲೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ನೋಟೀಸನ್ನು ಆರ್ ಪಿ ಎ ಡಿ ಮುಖಾಂತರ ಕಳುಹಿಸಿರುತ್ತೇನೆ. ಸದರಿ ಆರ್ ಪಿ ಎ ಡಿ ಕಳುಹಿಸಿದ ಸಮಯಕ್ಕೆ ಸ್ವೀಕೃತಿಯನ್ನೂ ಸಹ ಅದರೊಂದಿಗೆ ಲಗತ್ತಿಸಲಾಗಿರುತ್ತದೆ ಎಂದರೆ ಸರಿ. ಸದರಿ ಸ್ವೀಕೃತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ನಾನು ನನ್ನ ಪಿರ್ಯಾದಿನಲ್ಲಿ ಆರೋಪಿಗೆ ನೋಟೀಸ್ ಜಾರಿಯಾಗಿದೆ ಎಂದು ಉಲ್ಲೇಖಿಸಿರುತ್ತೇನೆ ಎಂದರೆ ಸರಿ. ಸದರಿ ನೋಟಿಸ್ ಆರೋಪಿಗೆ ಯಾವ ದಿನಾಂಕದಂದು ಜಾರಿಯಾಗಿದೆ ಎಂದು ನನಗೆ ನೆನಪಿಲ್ಲ. ಸದರಿ ನೋಟೀಸ್ ಜಾರಿಯಾದ ದಿನಾಂಕದ ಕುರಿತು ನಾನು ಪಿರ್ಯಾದಿನಲ್ಲಿ ನಮೂದಿಸಿರುವುದಿಲ್ಲ. ಅದೇ ರೀತಿ ಯಾವ ವಿಳಾಸಕ್ಕೆ ಸದರಿ ನೋಟೀಸ್ ಜಾರಿಯಾಗಿದೆ ಎಂದು ನನ್ನ ಪಿರ್ಯಾದಿನಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಅದರಂತೆ ಸದರಿ ನೋಟೀಸ್ ಆರೋಪಿಯ ಯಾವ ವಿಳಾಸಕ್ಕೆ ಜಾರಿಯಾಗಿದೆ ಎಂದು ನನ್ನ ಪಿರ್ಯಾದಿನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಹಾಗಾಗಿ ನನ್ನ ಪಿರ್ಯಾದಿಗೆ ವ್ಯಾಜ್ಯ ಕಾರಣ ಯಾವಾಗ ಉಂಟಾಯಿತು ಎಂದರೆ ಸಾಕ್ಷಿ ಆರೋಪಿ ದಿಃ 14.06.2023 ರಂದು ಚೆಕ್ ನ್ನು ನೀಡಿ ಬ್ಯಾಂಕ್ ಗೆ ನಗದೀಕರಣಕ್ಕಾಗಿ ಸಲ್ಲಿಸುವಂತೆ ತಿಳಿಸಿರುತ್ತಾರೆ ಅದೇ ರೀತಿ ನಾನು ಅವರಿಗೆ ಫೋನ್ ಮಾಡಿ ಕೇಳಿದಾಗ ಆರೋಪಿ ೆ ೆ ನನ್ನ ಬಳಿಈಗ ಹಣವಿಲ್ಲ ನಾಳೆ ಹಾಕಿ ಎಂದು ತಿಳಿಸಿರುತ್ತಾರೆ ೆ ೆ . ಹಾಗಾಗಿ ನಾನು ಈ ಪಿರ್ಯಾದನ್ನು ದಾಖಲಿಸಲು ಯಾವಾಗ ವ್ಯಾಜ್ಯ ಕಾರಣ ದಿಃ 14.06.2023 ರಂದು ಉಂಟಾಗಿರುತ್ತದೆ. ಸದರಿ ದಿನಾಂಕದಂದು ನನಗೆ ಈ ಪಿರ್ಯಾದು ದಾಖಲಿಸಲು ಯಾವುದಕೇ ವ್ಯಾಜ್ಯ ಕಾರಣ ಉಂಟಾಗದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನೋಟೀಸ್ ಯಾವಾಗ ಜಾರಿಯಾಯಿತು ಎಂದು ನನ್ನ ಪಿರ್ಯಾದುನಲ್ಲಾಗಲೀ ಅಥವಾ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ. ಆರೋಪಿಗೆ ನಾನು ಕಳುಹಿಸಿದ ನೋಟೀಸ್ ಯಾವಾಗ ಜಾರಿಯಾಗಿದೆ ಎಂದರೆ ನನಗೆ ನೆನಪಿಲ್ಲ. ನಾನು ಆರೋಪಿಗೆ ಯಾವುದೇ ನೋಟೀಸ್ ಕಳುಹಿಸಿಲ್ಲ ಮತ್ತು ಸದರಿ ನೋಟಿಸ್ ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ.

ನಿಪಿ.5 ರಲ್ಲಿ ಸದರಿ ನೋಟೀಸ್ ಯಾವ ದಿನಾಂಕ, ಯಾವ ವ್ಯಕ್ತಿಗೆ, ಯಾವ ವಿಳಾಸಕ್ಕೆ ಜಾರಿಯಾಗಿದೆ ಎಂದು ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಂಚೆ ಇಲಾಖೆಯಿಂದ ಡೆಲಿವರಿ ಮಾನಿಫೆಸ್ಟೂವನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನೂ ತೊಂದರೆ ಇಲ್ಲ ಎಂದರೆ ಸಾಕ್ಷಿ ನಾನು ನಿಪಿ.5 ನ್ನು ಅಂಚೆ ಇಲಾಖೆಯಿಂದ ಪಡೆದು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.5 ಡೆಲಿವರಿ ಮಾನಿಫೆಸ್ಟೂ ಅಲ್ಲ ಸದರಿ ದಾಖಲೆ ಟ್ರಾಕಿಂಗ್ ರಿಪೋರ್ಟ್ ಎಂದರೆ ಸರಿ. ಹಾಗಾಗಿ ಸದರಿ ಡೆಲಿವರಿ ಮಾನಿಫೆಸ್ಟೂವನ್ನು ಅಂಚೆ ಇಲಾಖೆಯಿಂದ ಪಡೆದು ಹಾಜರುಪಡಿಸಲು ನನಗೇನೂ ತೊಂದರೆ ಇಲ್ಲ ಎಂದರೆ ಸಾಕ್ಷಿ ನನಗೆ ಸದರಿ ಸಂಗತಿಯ ಕುರಿತು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರದ ಕುರಿತು ತಿಳಿದುಕೊಂಡು ಅರ್ಜಿ ಮುಖೇನ ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ನೊಂದಾಯಿತ ಅಂಚೆಯನ್ನು ಜಾರಿಗೊಳಿಸುವಾಗ ಅಂಚೆ ಇಲಾಖೆಯ ಸಿಬ್ಬಂದಿಯವರು ನಮ್ಮಿಂದ ಸ್ವೀಕೃತಿಗೆ ಸಹಿ ಪಡೆಯುತ್ತಾರೆ ಎಂದರೆ ಸರಿ. ನಿಪಿ.5 ರಲ್ಲಿ ಸದರಿ ನೋಟೀಸನ್ನು ಪಡೆದವರು ಯಾರು , ಯಾವ ವಿಳಾಸಕ್ಕೆ ಜಾರಿಯಾಗಿದೆ ಎಂದು ವಿವರ ದೊರೆಯುವುದಿಲ್ಲ ಎಂದರೆ ಸರಿ. ಹಾಗಾಗಿ ನಾನು ಕಳುಹಿಸಿದ ನೋಟೀಸು ಆರೋಪಿಗೆ ಜಾರಿಯಾಗದ ಕಾರಣ ಆರೋಪಿ ನನಗೆ ಯಾವುದೇ ಮರು ಉತ್ತರವನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ.1ರ ಮೇಲ್ಭಾಗದ ನಮೂದು ನಮ್ಮ ಖಾತೆ ಸಂಖ್ಯೆಯನ್ನು ಸೂಚಿಸುತ್ತದೆ ಸದರಿ ನಿಪಿ.1ರ ಪೇ ಇ ಎಂದು ನಮೂದು ಇರುವ ಖಾತೆ ಸಂಖ್ಯೆಯ ಬರವಣಿಗೆ ಯಾರದ್ದು ಎಂದರೆ ಸಾಕ್ಷಿ ಆರೋಪಿಯದ್ದೇ ಎಂದು ನುಡಿಯುತ್ತಾರೆ. ಸದರಿ ನಿಪಿ.1 ನ್ನು ಕೊಡುವ ಕಾಲಕ್ಕೆ ಆರೋಪಿಗೆ ನನ್ನ ಖಾತೆ ಸಂಖ್ಯೆ ಹೇಗೆ ತಿಳಿಯಿತು ಎಂದರೆ ಸಾಕ್ಷಿ ಆರೋಪಿ ನಮ್ಮ ಮನೆಗೆ ಬಂದು ನನ್ನ ಖಾತೆ ಸಂಖ್ಯೆಯ ಪಾಸ್ ಪುಸ್ತಕ ಪಡೆದು ಅದರಲ್ಲಿನ ಸಂಖ್ಯೆಯನ್ನು ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನಿಪಿ.1 ನ್ನು ಬರೆಯಲು ಎರಡು ಪೆನ್ನುಗಳನ್ನು ಪಡೆದಿರುತ್ತಾರೆ. ಮೊದಲಿಗೆ ನನ್ನ ಹೆಸರು ಮತ್ತು ಖಾತಾ ವಿವರವನ್ನು ಒಂದು ಶಾಯಿಯಲ್ಲಿ ಬರೆದಿದ್ದು ಆರೋಪಿ ಅವರ ಸಹಿಯನ್ನು ಇನ್ನೊಂದು ಶಾಯಿಯಲ್ಲಿ ಮಾಡಿರುತ್ತಾರೆ. ಸದರಿ ದಿನಾಂಕ ಚೆಕ್ ನ ವಿವರ ನಮೂದಿಸಿಸುವ ಸಮಯಕ್ಕೆ ಸದರಿ ಇಂಕ್ ನ ಪೆನ್ನು ಸರಿಯಾಗಿ ಬರೆಯದ ಕಾರಣ ಆರೋಪಿ ಇನ್ನೊಂದು ಪೆನ್ನನ ಶಾಯಿಯಿಂದ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಒಂದು ಪೆನ್ ನ ಶಾಯಿ ಖಾಲಿಯಾದ ಕಾರಣ ಆರೋಪಿ ಇನ್ನೊಂದು ಪೆನ್ ನಿಂದ ಸಹಿ ಮಾಡಿರುತ್ತಾರೆ. ಸಾಮಾನ್ಯವಾಗಿ ಪೆನ್ ನ ಶಾಯಿ ಖಾಲಿಯಾದಾಗ ಬರವಣಿಗೆ ಕಟ್ ಕಟ್ ಆಗಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆರೋಪಿ ಹೇಳಿದಂತೆ ನಾನು ಪೆನ್ ನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ನಿಪಿ.1 ನ್ನು ಬರೆಯಲು ಮೂರು ಶಾಯಿಗಳನ್ನು ಬಳಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿನ ಸಹಿಯನ್ನು ಮಾತ್ರ ಆರೋಪಿ ಮಾಡಿದ್ದು ಉಳಿದ ವಿವರಗಳಾದ ಹೆಸರು ಮತ್ತು ಮೊತ್ತವನ್ನು ಒಂದು ಶಾಯಿಯಲ್ಲಿ ಮತ್ತು ಖಾತೆ ಸಂಖ್ಯೆಯನ್ನು ಒಂದು ಶಾಯಿಯಲ್ಲಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನಿಪಿ.1 ಕ್ಕೆ ಸಹಿಯನ್ನು ಮಾತ್ರ ಮಾಡಿದ್ದು ಉಳಿದ ವಿವರಗಳನ್ನು ನಾನೇ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಮೂದುಗಳನ್ನು ನಾನು ಮತ್ತು ಇನ್ನೊಬ್ಬ ವ್ಯಕ್ತಿ ಸೇರಿ ಎರಡು ಶಾಯಿಯಲ್ಲಿ ನಮೂದಿಸಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿಯ ಮನೆಯಲ್ಲಿ ನಾಲ್ಕು ಜನರಿದ್ದಾರೆ. ಆರೋಪಿಗೆ ಎಷ್ಟು ಸಂಬಳ ಬರುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ಸಾಲ ಕೊಡುವ ಮುನ್ನ ಆರೋಪಿಯು ಸಾಲ ಮರುಪಾವತಿ ಸಾಮರ್ಥ್ಯವನ್ನು ತಿಳಿದು ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಸಾಲವನ್ನು ಒಬ್ಬ ವ್ಯಕ್ತಿಗೆ ಕೊಡುವಾಗ ಆತನ ಸಾಮರ್ಥ್ಯವನ್ನು ತಿಳಿದುಕೊಳ್ಳಬೇಕು. ನಾನು ಆರೋಪಿಗೆ ಸಾಲವನ್ನು ಕೊಡುವಾಗ ಆಕೆಯ ಸಾಮರ್ಥ್ಯವನ್ನು ತಿಳಿದು ಕೊಟ್ಟಿದ್ದೀರೋ ಅಥವಾ ಇಲ್ಲವೊ ಎಂದರೆ ಸಾಕ್ಷಿ ನಾನು ಆಕೆಯ ಆಕೆಯ ಸಾಮರ್ಥ್ಯವನ್ನು ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ.

ನಿಪಿ.3 ನ್ನು ನಮ್ಮ ವಕೀಲರು ನೀಡಿರುತ್ತಾರೆ. ಸದರಿ ಲೀಗಲ್ ನೋಟೀಸ್ ನ 2ನೇ ಪುಟದಲ್ಲಿ ಕಕ್ಷಿದಾರರ ಸಹಿ ಇದೆ ಸದರಿ ಸಹಿ ನನ್ನದೇ. ಸಾಕ್ಷಿಗೆ ಈಗ ಮತ್ತೊಂದು ದಾಖಲೆ ತೋರಿಸಲಾಗಿ ಸದರಿ ದಾಖಲೆ ದಿಃ 26.04.2023ರ ಪ್ರಾಮಿಸರಿ ನೋಟಾಗಿದ್ದು ಸದರಿ ದಾಖಲೆಯ ಎರಡನೇ ಪುಟದಲ್ಲಿ ಇರುವ ಸಹಿ ನನ್ನದಲ್ಲ. ಸದರಿ ದಾಖಲೆಯಲ್ಲಿ ಆರೋಪಿತರ ಸಹಿ ಇದೆ ಎಂದರೆ ನನಗೆ ಸದರಿ ದಾಖಲೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗ ಈಗ ನಿಪಿ.3 ರಲ್ಲಿನ ಎಡಭಾಗದ ಸಹಿ ಮತ್ತು ಪ್ರಾಮಿಸರಿ ನೋಟ್ ನಲ್ಲಿನ ಎಡಭಾಗದಲ್ಲಿನ ಸಹಿ ಯಾರದ್ದು ಎಂದರೆ ಸಾಕ್ಷಿ ನಿಪಿ.3 ರಲ್ಲಿನ ಸಹಿ ನನ್ನದು ಎಂದು ಇನ್ನೊಂದು ದಾಖಲೆಯಲ್ಲಿನ ಸಹಿ ಯಾರದ್ದು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ ನಿಪಿ. 3 ರಲ್ಲಿನ ಸಹಿ ಮತ್ತು ಪ್ರಾಮಿಸರಿ ನೋಟ್ ನಲ್ಲಿನ ಸಹಿ ಒಂದೇ ರೀತಿ ಇವೆ ಎಂದರೆ ಸರಿಯಲ್ಲ. ಸದರಿ ಎರಡೂ ದಾಖಲೆಯಲ್ಲಿನ ಸಹಿಗಳು ನಮ್ಮವೇ ಆಗಿದ್ದರೂ ಸಹ ಒಂದು ಸಹಿಯನ್ನು ಒಪ್ಪಿ ಇನ್ನೊಂದು ಸಹಿಯನ್ನು ನಿರಾಕರಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಈ ಮೊದಲು ಈ ಪ್ರಶ್ನೆ ಕೇಳಿದಾಗ ಸದರಿ ಸಹಿಗಳು ನನ್ನವೇ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ದಿಃ 26.04.2023 ರಂದು ಪ್ರಾಮಿಸರಿ ಪತ್ರ ತಯಾರಾಗಿತ್ತು ಎಂದರೆ ಸರಿಯಲ್ಲ , ಸದರಿ ಸಮಯದಲ್ಲಿ ಆರೋಪಿಯ ಮಗನಾದ ರೂಪೇಶ್ ಎಂಬಾತನೂ ಸಹ ಸಾಕ್ಷಿಧಾರರಾಗಿ ಸದರಿ ಪ್ರಾಮಿಸರಿ ಪತ್ರಕ್ಕೆ ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಾಮಿಸರಿ ಪತ್ರವನ್ನು ಚನ್ನಗಿರಿಯಲ್ಲೆ ಪಡೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಶಿವಮೊಗ್ಗದವರು ಎಂದರೆ ಸಾಕ್ಷಿ ಪ್ರಸ್ತುತ ಶಿವವೊಗ್ಗದಲ್ಲಿ ಇದ್ದು ಮೂಲತಃ ನಮ್ಮ ಗ್ರಾಮದ ಪಕ್ಕದ ಹಳ್ಳಿಯಾದ ಹೊನ್ನೆಮರದಹಳ್ಳಿ ಗ್ರಾಮದವರು ಎಂದು ನುಡಿಯುತ್ತಾರೆ. ಸದರಿ ಪತ್ರವನ್ನು ಖರೀದಿಸಿದ ದಿನದಂದೇ ಆರೋಪಿ ನನಗೆ ಪ್ರಾಮಿಸರಿ ಪತ್ರಬರೆದುಕೊಟ್ಟಿದ್ದು ಸದರಿ ಪತ್ರವನ್ನು ರೂ.8,00,000/-ಕ್ಕೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರಾಮಿಸರಿ ಪತ್ರವನ್ನು ಯೂರಿಂದಲೂ ಪಡೆದಿಲ್ಲ ಮತ್ತು ಸದರಿ ಪತ್ರದ ಬಗ್ಗೆ ನನಗೆ ಯಾವುದೇ ಅನುಭವವಿಲ್ಲ. ಸದರಿ ಪ್ರಾಮಿಸರಿ ಪತ್ರದ ಮೂಲ ಪ್ರತಿ ಯಾರು ಸಾಲ ಕೊಡುತ್ತಾರೋ ಅವರ ಬಳಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ಜ್ಞಾನವಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆ ಎಂದರೆ ಸರಿಯಲ್ಲ. ಸದರಿ ಪ್ರಾಮಿಸರಿ ನೋಟ್ ನ ಮೂಲ ಪ್ರತಿ ನನ್ನ ಬಳಿಯೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

ಸದರಿ ಪ್ರಾಮಿಸರಿ ನೋಟ್ ನ ಪ್ರಕಾರ ದಿಃ 26.04.2023 ರಂದು ಆರೋಪಿ ನನ್ನಿಂದ ಎಂಟು ಲಕ್ಷ ರೂ ಸಾಲವನ್ನು ಪಡೆದಿದ್ದು ಅದನ್ನು ದಿಃ 26. 06.2023ರ ಒಳಗಾಗಿ ಸಂಪೂರ್ಣ ಸಾಲ ಮತ್ತು ಶೇಕಡಾ 2 ರಂತೆ ಬಡ್ಡಿ ಯನ್ನು ಕೊಡಲು ಆರೋಪಿ ಒಪ್ಪಿದ್ದರು ಎಂದರೆ ಸರಿಯಲ್ಲ. ನಾನು ಈ ಪಿರ್ಯಾದಿನಲ್ಲಿ ಸಲ್ಲಿಸಿರುವ ಚೆಕ್ ನ ಸಂಖ್ಯೆ 348762 ಆಗಿದೆ. ಸದರಿ ಪ್ರಾಮಿಸರಿ ನೋಟ್ ನಲ್ಲಿ ಸದ ರಿ ಚೆಕ್ ಸಂಖ್ಯೆಯನ್ನು ನಮೂದಿಸಲಾಗಿದೆ ಎಂದು ಸದರಿ ಪ್ರಾಮಿಸರಿ ದಾಖಲೇ ತೋರಿಸಿ ಕೇಳಲಾಗಿ ಸಾಕ್ಷಿ ಸದರಿ ದಾಖಲೆಯಲ್ಲಿ ಚೆಕ್ ಸಂಖ್ಯೆ ನಮೂದು ಇದೆ ಎಂದು ನುಡಿಯುತ್ತಾರೆ. ಸದರಿ ಚೆಕ್ ಸಂಖ್ಯೆಯೊಂದಿಗೆ ಉಳಿದ ಮೂರು ಚೆಕ್ಕುಗಳ ಸಂಖ್ಯೆಯೂ ಸಹ ನಮೂದು ಇದೆ ಎಂದರೆ

ಸಾಕ್ಷಿ ಸದರಿ ಸಂಖ್ಯೆಗಳು ಯಾವುವು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ.1ರ ಜೊತೆಗೆ ಚೆಕ್ ಸಂಖ್ಯೆಗಳಾದ 348763 , 348764, 348765ಗಳನ್ನು ಆರೋಪಿ ತಾನು ಪಡೆದ ಎಂಟು ಲಕ್ಷ ರೂಗಳ ಸಾಲದ ಭದ್ರತೆಗಾಗಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಬಳಸಲಾದ ಮೂರು ಶಾಯಿಗಳ ಕುರಿತು ತಜ್ಞರ ಪರಿಶೀಲನೆಗಾಗಿ ಕಳುಹಿಸಲು ನನ್ನದೇನೂ ಅಭ್ಯಂತರವಿಲ್ಲ. ಸದರಿ ಪ್ರಾಮಿಸರಿ ನೋಟ್ ನ ಪ್ರಕಾರ ಸಾಲದ ಮರುಪಾವತಿಗಾಗಿ ಆರೋಪಿಗೆ ದಿಃ 26.06.2023ರ ವರೆಗೂ ಕಾಲಾವಕಾಶ ಇತ್ತು ಎಂದರೆ ಸಾಕ್ಷಿ ಸದರಿ ಪ್ರಾಮಿಸರಿ ನೋಟ್ ನ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಾಗಾಗಿ ಸದರಿ ಸಾಲದ ಭದ್ರತೆಗಾಗಿ ನೀಡಿರುವ ನಿಪಿ.1 ನ್ನು ಅವಧಿಗೂ ಮುನ್ನ ದಿಃ 14.06.2023 ಎಂದು ನಾನೇ ಬರೆದುಕೊಂಡು ಬ್ಯಾಂಕ್ಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಪಿರ್ಯಾದಿನಂತೆ ಆರೋಪಿ ನನ್ನಿಂದ ಸಾಲವನ್ನು ದಿಃ 12.03.2023 ರಂದು ಪಡೆದಿರುತ್ತಾರೆ. ಈ ಪಿರ್ಯಾದನ್ನು ಸಲ್ಲಿಸಲು ಸುಳ್ಳು ಕಥೆಯನ್ನು ಸೃಷ್ಟಿಸಿ ಆರೋಪಿಗೆ ಸಾಲ ಮರುಪಾವತಿಗೆ ನೀಡಿದ ಕಾಲಾವಕಾಶವಕ್ಕೂ ಮುನ್ನವೇ ಭದ್ರತೆಗಾಗಿ ನೀಡಿದ ನಾಲ್ಕು ಚೆಕ್ಕುಗಳಲ್ಲಿ ಒಂದು ಚೆಕ್ಕನ್ನು ದಿನಾಂಕ ಮತ್ತು ವಿವರವನ್ನು ನಮೂದಿಸಿ ಈ ಪಿರ್ಯಾದನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮದ್ಯಾಹ್ನ ಊಟದ ಸಮಯವಾದ ಕಾರಣ ಮುಂದುವರೆದು ಪಾಟೀ ಸವಾಲನ್ನು ಮುಂದೂಡಲಾಯಿತು.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**